

# ಮೊಗ್ಗಿನ ಜಡೆಯಲ್ಲಿ ಅರಳುವ ಚೆಲುವು

ಮದುವೆ ಸಮಾರಂಭದಲ್ಲಿ ಮದುವಣಗಿತ್ತಿಗೆ ಮೊಗ್ಗಿನ ಜಡೆ ಹಾಕಿ ಸಂಭ್ರಮಿಸುವುದು ರೂಢಿ. ಸಾಂಪ್ರದಾಯಿಕ ಮೊಗ್ಗಿನ ಜಡೆ ಫ್ಯಾಷನ್ ಕೂಡ ಆಗಿದೆ.

**ಆಶಾ ಎಸ್. ಕುಲಕರ್ಣಿ**
ಚಿತ್ರಗಳು: ಉಮಾ ಜಯಕುಮಾರ್



ಸೌಂದರ್ಯಕ್ಕೂ ಶೃಂಗಾರಕ್ಕೂ ಅವಿನಾಭಾವ ಸಂಬಂಧ. ಸುಂದರ ಹಾಗೂ ಆಕರ್ಷಕ ವ್ಯಕ್ತಿತ್ವ ತನ್ನದಾಗಬೇಕು ಎಂಬ ಬಯಕೆ ಮಹಿಳೆಯರಲ್ಲಿ ಹೆಚ್ಚು. ಕಾಲಕ್ಕೆ ತಕ್ಕಂತಹ ಉಡುಗೆ, ತೊಡುಗೆಯ ಜೊತೆಗೆ ಕೇಶಾಲಂಕಾರ ಕೂಡ ಬದಲಾಗುತ್ತಲೇ ಇರುತ್ತದೆ. ತಮ್ಮ ಮುಖದ ಸೌಂದರ್ಯಕ್ಕೆ ಮತ್ತು ತಮ್ಮ ಉಡುಪಿಗೆ ತಕ್ಕಂತೆ ಕೇಶಾಲಂಕಾರ ಮಾಡಿಕೊಳ್ಳುವುದೂ ಈಗಿನ ಹೊಸ ಟ್ರೆಂಡ್.

ಶ್ರಾವಣ ಮಾಸ ಪ್ರಾರಂಭವಾಗುತ್ತಿದ್ದಂತೆ ಹಬ್ಬಗಳ ಸುರಿಮಳೆ. ಅದರಲ್ಲೂ ಮದುವೆ ಸೀಸನ್ ಆಗಿರುವುದರಿಂದ ಮಲ್ಲಿಗೆ ಹೂವಿನ ಜಡೆಗಳಿಗೆ ಬೇಡಿಕೆ ಜಾಸ್ತಿ. ಮೊಗ್ಗಿನ ಜಡೆಯನ್ನು ಮದುವೆ, ಸೀಮಂತ ಇಂತಹ ಶುಭ ಸಮಾರಂಭಗಳಲ್ಲಿ ಹೆಂಗಳೆಯರು ಮುಡಿಗೆ ಧರಿಸಿ ನಡೆಯುತ್ತಿದ್ದರೆ ನೋಡಲೆರಡು ಕಣ್ಣು ಸಾಲದು. ಜೊತೆಗೆ ಅದರ ಅಂದ, ವಿನ್ಯಾಸ, ಸೊಬಗೇ ಥಟ್ಟನೆ ಸೆಳೆಯುವಂಥದ್ದು.

ಈಗಿನ ಜಮಾನಾದ ಯುವತಿಯರು ಯಾವುದೇ ಫ್ಯಾಷನ್‌ಗೆ ಮೊರೆ ಹೋದರೂ ಹಬ್ಬ ಹರಿದಿನಗಳಲ್ಲಿ ಸೀರೆ ಉಟ್ಟು, ಮೊಗ್ಗಿನ ಜಡೆ ಧರಿಸಿ ಮಿನುಗುವುದು ಮಾತ್ರ ನಿಂತಿಲ್ಲದಿರುವುದು ಭಾರತೀಯ ಸಂಪ್ರದಾಯದ ಜೀವಂತಿಕೆಗೆ ಸಾಕ್ಷಿ. ಸಾಮಾನ್ಯವಾಗಿ ಹಿಂದೆಲ್ಲಾ ಹಳ್ಳಿಗಳಲ್ಲಿ ತಮ್ಮ ಮನೆಯ ಹಿತ್ತಲಿನಲ್ಲಿ ಬಿಡುವ ಮಲ್ಲಿಗೆ ಹೂವಿನ ಮಧ್ಯೆ ಮಧ್ಯೆ ಕನಕಾಂಬರ, ಸೇವಂತಿಗೆ, ಗುಲಾಬಿ ಹೂಗಳನ್ನು ಪೋಣಿಸಿ ಅದರಲ್ಲೇ ಒಂದು ಕಲಾತ್ಮಕ ಜಡೆ ಹೆಣೆದು ಹೆಣ್ಣು ಮಕ್ಕಳಿಗೆ ಸಮಾರಂಭದಲ್ಲಿ ಮುಡಿಸುವ ವಾಡಿಕೆ ಇತ್ತು. ಆದರೆ ಈಗಿನ ಧಾವಂತದ ಬದುಕಿನಲ್ಲಿ ಈ ತರಹದ ಜಡೆ ಹೆಣೆಯಲು ತಾಳ್ಮೆ, ಸಮಯ ಮತ್ತು ಹೂವುಗಳನ್ನು ಬೆಳೆಸಲು ಸ್ಥಳ ಕೂಡ ಇಲ್ಲದ ಕಾರಣ ಮಾರುಕಟ್ಟೆಯಲ್ಲಿ ದೊರೆಯುವ ಸುಮಧುರ ಸುವಾಸನೆಯ ರೆಡಿಮೇಡ್ ಮೊಗ್ಗಿನ ಜಡೆ ಖರೀದಿಸುವುದು ಅನಿವಾರ್ಯವಾಗಿದೆ.

ಮದುವೆಯ ಸಂದರ್ಭ ಎಂದರೆ ಕೇಳಬೇಕೇ? ವಧುವಿಗೆ ಬಿಂದಿಯಿಂದ ಹಿಡಿದು ಎಲ್ಲ